ರಾಷ್ಟ್ರೀಕರಣವಾಗಿಲ್ಲ. ಆದರೆ ಮಂಗಳೂರು-ಚಾರ್‌ಮುಡಿ, ಮಂಗಳೂರು-ಹಾಸನ ವಯಾ ಸಕಲೇಶಪುರ, ಮಂಗಳೂರು-ಮಡಿಕೇರಿ ವಯಾ ಪುತ್ತೂರು ಮತ್ತೆ ಪುತ್ತೂರು-ಸುಬ್ರಮಣ್ಯ ಮಾರ್ಗ ರಾಷ್ಟ್ರೀಕೃತವಾಗಿದೆ. ಸೂಕ್ತ ನಿವೇಶನವನ್ನು ಸ್ವಾಧೀನಕ್ಕೆ ಪಡೆದ ನಂತರ ಬಸ್‌ನಿಲ್ದಾಣ ನಿರ್ಮಿಸಲಾಗುವುದು.

ಉಜಿರೆ:- ಉಜಿರೆ ಕೂಡ ಬೆಳ್ತಂಗಡಿ ತಾಲ್ಲೂಕಿನ ಒಂದು ಗ್ರಾಮ. ಧರ್ಮಸ್ಥಳದ ಕಡೆಗೆ ಸಂಚರಿಸುವ ವಾಹನಗಳು ಈ ಸ್ಥಳದಲ್ಲಿ ನಿಂತು ಪ್ರಯಾಣಿಕರನ್ನು ಕೊಂಡೊಯ್ಯುತ್ತವೆ. ಸಧ್ಯ ೧೩೫ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳು ಈ ಗ್ರಾಮವನ್ನು ತಲುಪುತ್ತವೆ. ಈ ಗ್ರಾಮವು ಧರ್ಮಸ್ಥಳದಿಂದ ಬರೇ ೧೦ ಕಿ. ಮಿ. ಗಳ ಅಂತರದಲ್ಲಿರುವುದರಿಂದ ಆಧುನಿಕ ಮಾದರಿಯ ಬಸ್ ನಿಲ್ದಾಣದ ಅವಶ್ಯಕತೆ ಇರುವುದಿಲ್ಲ. ಧರ್ಮಸ್ಥಳದಲ್ಲಿ ಆಧುನಿಕ ಮಾದರಿಯ ಬಸ್ ನಿಲ್ದಾಣದ ಅವಶ್ಯಕತೆ ಇರುತ್ತದೆ. ಒಂದು ದೊಡ್ಡ ಮಾದರಿಯ ತಂಗುದಾಣದ ಸೌಲಭ್ಯ ಒದಗಿಸಿದರೆ ಸಾಕಾಗುತ್ತದೆ. 'ಸಹ್ಯದಯ ವೇದಿಕೆ' ಎಂಬ ಸಂಸ್ಥೆಯು ಉಚಿತವಾಗಿ ಈ ಉದ್ದೇಶಕ್ಕೆ ನಿವೇಶನ ನೀಡಲು ಮುಂದೆ ಬಂದಿದೆ. ಮಂಗಳೂರಿನ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಈ ದಿಸೆಯಲ್ಲಿ ಸೂಕ್ತ ಸಲಹೆ ನೀಡಲಾಗಿದೆ. ನಿವೇಶನದ ಹಸ್ತಾಂತರವಾದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಧರ್ಮಸ್ಥಳ:- ಧರ್ಮಸ್ಥಳ ಕೂಡಾ ಒಂದು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಪ್ರಮುಖ ಯಾತ್ರಾ ಸ್ಥಳ. ಇಲ್ಲಿ ಒಂದು ಬಸ್ ಡಿಪೋ ಇದೆ. ಆದರೆ ಬಸ್ ನಿಲ್ದಾಣ ಇರುವುದಿಲ್ಲ. ಸಧ್ಯ ಇಲ್ಲಿ ಕೂಡ ೧೩೫ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳ ಆಗಮನ ನಿರ್ಗಮನಗಳಿವೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಧರ್ಮಸ್ಥಳ ದೇವಸ್ಥಾನ ಧರ್ಮಾಧಿಕಾರಿಯನ್ನು ಸಾಕಷ್ಟು ನಿವೇಶನವನ್ನು ಒದಗಿಸುವಂತೆ ಒತ್ತಾಯಿಸುತ್ತಿದೆ. ದೇವಸ್ಥಾನದ ಅಧಿಕಾರಿಗಳು ಸೂಚಿಸಿದ ನಿವೇಶನವು ಸಮಂಜಸವಾಗಿಲ್ಲ ಕಾರಣ ಈ ಸಂಸ್ಥೆಯು ಬೇರೆ ತೆಂಗಿನ ತೋಟದ ಜಮೀನನ್ನು ಆಯ್ಕೆ ಮಾಡಿದೆ. ಈ ವಿಷಯದ ಬಗ್ಗೆ ದೇವಸ್ಥಾನದ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರಿನ ಲಕ್ಕಸಂದ್ರದ ಬಂಡೆಯ ಬಳಿ ಕೂಡಲೇ ಕಲ್ಲು ಚಪ್ಪಡಿಗಳನ್ನು ಹಾಕುವ ಬಗ್ಗೆ

ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರಿನ ಲಕ್ಕಸಂದ್ರದ ಬಳಿ ಒಂದು ದೊಡ್ಡ ಬಂಡೆ ಕ್ವಾರಿ ಇದ್ದು, ಅದರ ಸುತ್ತಲೂ ಹಾಕಿದ್ದ ಕಲ್ಲು ಚಪ್ಪಡಿಗಳು ಬಿದ್ದುಹೋಗಿದ್ದು, ೮-೩-೯೨ರಂದು ಇಬ್ಬರು ಮಕ್ಕಳು ಹಳ್ಳಕ್ಕೆ ಬಿದ್ದು ತೊಂದರೆಗೀಡಾಗಿದ್ದಾರೆ. ಇದೇ ರೀತಿ ಹಲವಾರು ಜನ ಅಪಾಯಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಕೂಡಲೇ ಬಿದ್ದು ಹೋಗಿರತಕ್ಕ ಎಲ್ಲಾ ಕಲ್ಲು ಚಪ್ಪಡಿಗಳನ್ನು ಹಾಕಿಸಲು ಬೆಂಗಳೂರು ಮಹಾನಗರ ಪಾಲಿಕೆಯವರು ಕ್ರಮ ಕೈಗೊಳ್ಳ ಬೇಕಾಗಿದೆ. ಆದ್ದರಿಂದ ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಕೋರುತ್ತೇನೆ.

ಶ್ರೀ ಕೆ. ಜೆ. ಜಾರ್ಜ್(ವಸತಿ ಮತ್ತು ನಗರಾಭಿವೃದ್ಧಿ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷರೇ, ವಿಭಾಗ ೫೫ ಲಕ್ಕಸಂದ್ರದ, ಬನ್ನೇರುಘಟ್ಟ ರಸ್ತೆಗೆ ಹೊಂದಿಕೊಂಡಿರುವ ಹಲವು ಪ್ರದೇಶಗಳ

ಮಕ್ಕಳು ಆಟವಾಡುವ ಸಂದರ್ಭದಲ್ಲಿ ದಿನಾಂಕ ೮-೩-೯೨ರಂದು ಆಕಸ್ಮಿಕವಾಗಿ ಇಬ್ಬರು ಮಕ್ಕಳು ಬಂಡೆಯ ಹಳ್ಳಕ್ಕೆ ಬಿದ್ದಿರುತ್ತಾರೆ. ಇದನ್ನು ನೋಡಿದ ಸುತ್ತಮುತ್ತಲ ಜನರು ರಕ್ಷಿಸಿರುತ್ತಾರೆ. ಈ ಹಳ್ಳದ ದಕ್ಷಿಣ ಭಾಗದ ಕಡೆಗೆ ಬಹಳ ಕಿರಿದಾದ ರಸ್ತೆ ಇದ್ದು (೧೨ ಅಡಿ - ೧೪ ಅಡಿ) ಈ ರಸ್ತೆಯನ್ನು ದ್ವಿಚಕ್ರ ವಾಹನಗಳ ಸವಾರರು, ಸೈಕಲ್ ಸವಾರರು ಹಾಗೂ ಬಡವರ ಸಂಘದಲ್ಲಿ ಕಟ್ಟುತ್ತಿರುವ ಮನೆಗಳಿಗೆ ಮರಳು ಮತ್ತು ಇಟ್ಟಿಗೆಗಳನ್ನು ಸಾಗಿಸಲು ಎತ್ತಿನ ಗಾಡಿಗಳವರು ಉಪಯೋಗಿಸುತಿದ್ದಾರೆ. ಈ ರಸ್ತೆಯ ಅಂಚಿಗೆ ಹೊಂದಿಕೊಂಡಿರುವ ಈ ಹಳ್ಳವು ಸುಮಾರು ೧೦೦ ಅಡಿಯಷ್ಟು ಆಳವಿದ್ದು ಬಹಳ ಕಡಿದಾಗಿರುತ್ತದೆ. ವಾಹನ ಚಾಲನೆ ಮತ್ತು ಜನರ ಓಡಾಟವನ್ನು ಈ ಭಾಗದಲ್ಲಿ ತಡೆಯಲು ಬಹಳ ಪ್ರಯತ್ನ ಪಟ್ಟರೂ ಈ ಭಾಗದ ಜನರು ಈ ರಸ್ತೆಗೆ ಹಾಕಿದ್ದ ಗಾರ್ಡ್ ಸ್ಟೋನ್‌ಗಳನ್ನು ಒಡೆದು ಹಾಕಿ ಪುನಃ ಉಪಯೋಗಿಸುತ್ತಾರೆ. ಈ ಎಲ್ಲಾ ಅನಾನುಕೂಲತೆಗಳನ್ನು ಪರಿಶೀಲಿಸಿ ಮಾನ್ಯ ಶಾಸಕರಾದ ಶ್ರೀ ರಾಮಲಿಂಗಾರೆಡ್ಡಿಯವರ ಕೋರಿಕೆಯಂತೆ ಮತ್ತು ವಿಭಾಗದ ನಗರ ಸಭಾ ಸದಸ್ಯರ ಕೋರಿಕೆಯಂತೆ ರಸ್ತೆಯ ಮಧ್ಯೆ ಭಾಗದಲ್ಲಿ ಸೈಜು ಕಲ್ಲುಗಳ ತಡೆಗೋಡೆಯನ್ನು ನಿರ್ಮಿಸಲು ಈಗಾಗಲೇ ೧೭೦೦೦ ರೂಪಾಯಿಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಈ ಕಿರಿದಾದ ರಸ್ತೆಗೆ ಹೊಂದುಕೊಂಡಂತೆ ೩ ಮನೆಗಳಿದ್ದು ಅವರಿಗೆ ಈಗಾಗಲೇ ಎಚ್ಚರಿಕೆಯನ್ನು ನೀಡಲಾಗಿದೆ. ಮುರಿದು ಬಿದ್ದಿರುವ ಕಲ್ಲುಗಳ ಜಾಗದಲ್ಲಿ ತಾತ್ಕಾಲಿಕವಾಗಿ ಕಲ್ಲುಗಳನ್ನು ನಿಲ್ಲಿಸಲಾಗಿದೆ ಮತ್ತು ಈ ರಸ್ತೆಯನ್ನು ಸದಾ ಓಡಾಟಕ್ಕೆ ಉಪಯೋಗಿಸದಂತೆ ಗಾರ್ಡ್-ಸ್ಟೋನ್‌ಗಳನ್ನು ಸಹ ನಿಲ್ಲಿಸಿ ರಸ್ತೆಯನ್ನು ಬಂದ್ ಮಾಡಲಾಗಿದ್ದು ಜನರು ಮಾತ್ರ ಓಡಾಡಲು ಜಾಗವನ್ನು ಬಿಡಲಾಗಿದೆ. ಈ ತಡೆಗೋಡೆಯನ್ನು ನಿರ್ಮಿಸಲು ತುರ್ತಾಗಿ ಕ್ರಮ ಕೈಗೊಳ್ಳಲಾಗುವುದು.

ನಾಗರ ಹೊಳೆ ಬೆಂಕಿ ದುರಂತಕ್ಕೆ ಕಾರಣರಾದರ ಮೇಲೆ ಕ್ರಮ ತೆಗೆದುಕೊಳ್ಳುವ ವಿಚಾರದ ಬಗ್ಗೆ

ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ):- ಮಾನ್ಯ ಅಧ್ಯಕ್ಷಣೆಯವರೇ, ನಾಗರಹೊಳೆಯ ಬೆಂಕಿ ದುರಂತದಿಂದ ನಾಡಿನ ನಾಗರೀಕರೆಲ್ಲಾ ನಾಚುವಂತಾಗಿದೆ. ಇದರ ಹಿನ್ನೆಲೆಯಲ್ಲಿ ಕಾಳಸಂತೆಕೋರರು, ಮರಗಳ್ಳರು, ಅಕ್ರಮ ಸಾಗಾಣೆದಾರರು, ಜೂಜುಕೋರರು ಇದ್ದು ಅವರ ಚಟುವಟಿಕೆಗಳನ್ನು ನಿಯಂತ್ರಿಸದಿದ್ದಲ್ಲಿ, ಗಂಧ ತೇಗದ ಮರಗಳ ತೋಪುಗಳ ಹಾಗೂ ಆಹಾರಧಾನ್ಯಗಳ ಅಕ್ರಮ ಸಾಗಾಣೆ ಹಾಗೂ ಮರಗಳ್ಳತನ ಜಾಸ್ತಿ ಆಗಿ ಈ ಸಮಾಜ ಘಾತಕರು ತಮ್ಮ ಪಕ್ತಿ ವರ್ಧಿಸಿಕೊಂಡು ನಾಗರಹೊಳೆ ಮಾತ್ರವಲ್ಲ ನಾಡಿಗೇ ಕಿಚ್ಚು ಹಚ್ಚುವ ದಿನ ದೂರವಿಲ್ಲ. ಇದಕ್ಕಾಗಿ ವಿಶೇಷ ಪೋಲೀಸ್ ಮತ್ತು ಅರಣ್ಯ ಇಲಾಖಾ ಪಡೆಯನ್ನು ನೇಮಿಸಬೇಕು. ಕೆಟ್ಟ ಪರಿಸರದಲ್ಲಿ ದಟ್ಟವಾಗಿ ನಡೆಯುವ ಈ ಚಟುವಟಿಕೆಗಳನ್ನು ಮಟ್ಟ ಹಾಕಲು ದಿಟ್ಟ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸರಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯೆಯರು ಎತ್ತಿರತಕ್ಕಂಥ ವಿಚಾರವನ್ನು ಮಾನ್ಯ ಅರಣ್ಯ ಮಂತ್ರಿಗಳ ಗಮನಕ್ಕೆ ತಂದು ಅವರಿಗೆ ಉತ್ತರವನ್ನು ಓದಗಿಸಿಕೊಡುತ್ತೇನೆ.

ಮಳವಳ್ಳಿ ತಾಲ್ಲೂಕಿನ ಬೊಪ್ಪೇಗೌಡನಪುರ ಹೋಬಳಿಯ ಸಮೀಪದ ಬಿ. ಜಿ. ಪುರ